## ಗ್ರಾಹಕ ಶಿಕ್ಷಣ

ವೆರಿಟಾಸ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್ ("ವೆರಿಟಾಸ್ ಫೈನಾನ್ಸ್" ಅಥವಾ "ಕಂಪನಿ"), ಒಂದು ವ್ಯವಸ್ಥಿತವಾಗಿ ಪ್ರಮುಖವಾದ ಠೇವಣಿಯೇತರ ಬ್ಯಾಂಕಿಂಗ್-ಏತರ ಹಣಕಾಸು ಸಂಸ್ಥೆ(NBFC) ಆಗಿದ್ದು, ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ನೋಂದಾಯಿತವಾಗಿದೆ. ವೆರಿಟಾಸ್ ಫೈನಾನ್ಸ್, MSME ವಲಯದಲ್ಲಿ ಸಣ್ಣ ವ್ಯವಹಾರಗಳಿಗೆ ನಿರ್ವಹಣಾ ಬಂಡವಾಳ ಮತ್ತು ವ್ಯಾವಹಾರಿಕ ಸಾಲದ ಅವಶ್ಯಕತೆಗಳನ್ನು ಪೂರೈಸುವ ಪ್ರಾಥಮಿಕ ಉದ್ದೇಶದೊಂದಿಗೆ ಮುನ್ನಡೆಯುತ್ತದೆ.

ನಿಯಂತ್ರಕ ಮಾರ್ಗಸೂಚಿಗಳ ಅನುಸಾರವಾಗಿ, ಪರಿಷ್ಕೃತ ಅನುತ್ಪಾದಕ ಆಸ್ತಿಗಳ(NPA) ನಿಯಮಗಳನ್ನು ಕುರಿತು ಗ್ರಾಹಕರಿಗೆ ತಿಳುವಳಿಕೆ ನೀಡಲು ಗಡುವಿನ ದಿನಾಂಕಗಳ ಮತ್ತು ಇತರ ಅಂಶಗಳ ಪ್ರಾಮುಖ್ಯತೆಯ ಬಗ್ಗೆ ಅವರಿಗೆ ಅರಿವು ಮೂಡಿಸಲು ಈ ಗ್ರಾಹಕ ಶಿಕ್ಷಣ ಮಾಹಿತಿಯನ್ನು ಕಂಪೆನಿಯ ಜಾಲತಾಣದಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ.

ವಿಧಿಸಲಾದ ಪ್ರಕ್ರಿಯೆಗಳಿಗೆ ಅನುಗುಣವಾಗಿ, ಸಂಭಾವ್ಯ ಗ್ರಾಹಕನನ್ನು ಭೇಟಿ ಮಾಡುವ ಸಮಯದಲ್ಲಿಯೇ ಕಂಪೆನಿಯು ಸಾಲಗಾರನಿಗೆ ಸಾಲದ ಮೊತ್ತ, ವಾರ್ಷಿಕಗೊಳಿಸಿದ ಬಡ್ಡಿದರ, ವಿಮಾ ಪ್ರೀಮಿಯಂ, ಪ್ರಕ್ರಿಯಾ ಶುಲ್ಕಗಳ ಬಗ್ಗೆ ಮಾಹಿತಿ ನೀಡುತ್ತದೆ. ಆಬಳಿಕ ಗ್ರಾಹಕನು, ನೇರ ಗುತ್ತಿಗೆ ಪ್ರಕ್ರಿಯೆಯ ಅಂಗವಾಗಿ ತನಗೆ ಒದಗಿಸಲಾದ ಮಾಹಿತಿಯ ಬಗ್ಗೆ ತೃಪ್ತಿ ಹೊಂದಿ, ಸಾಲದ ಅರ್ಜಿ ನಮೂನೆಯನ್ನು ಭರ್ತಿ ಮಾಡುತ್ತಾನೆ. ಸಾಲವು ಮಂಜೂರಾದ ಬಳಿಕ, ಕಂಪೆನಿಯು ನೀಡುವ ಮಂಜೂರಾತಿ ಪತ್ರದಲ್ಲಿ ಸಾಲದ ನಿಬಂಧನೆಗಳನ್ನು ಸ್ಪಷ್ಟವಾಗಿ ತಿಳಿಸಲಾಗಿರುತ್ತದೆ. ಇದರಲ್ಲಿ ವಿಳಂಬಿತ ಪಾವತಿಗೆ **ದಂಡ ಶುಲ್ಕಗಳು**, ಸಾಲದ ಅವಧಿ, ಕಂತಿನ ಮೊತ್ತವೂ ಸೇರಿದಂತೆ ಸಂಪೂರ್ಣ ಮರುಪಾವತಿಯ ವೇಳಾಪಟ್ಟಿ, ಅಸಲು ಮತ್ತು ಬಡ್ಡಿಯ ವಿಭಾಗ, ಇತ್ಯಾದಿಯಾಗಿ ಎಲ್ಲ ವಿವರಗಳೂ ಒಳಗೊಂಡಿರುತ್ತದೆ; ಮತ್ತು ಇನ್ನಷ್ಟು ವಿವರವಾದ ಮಾಹಿತಿಯನ್ನು ಸಾಲದ ಒಪ್ಪಂದದಲ್ಲಿ ಕೊಡಲಾಗಿದೆ.

## ಬಡ್ಡಿ ದರ

ಗ್ರಾಹಕರ ಅಪಾಯದ ಮೌಲ್ಯಮಾಪನಕ್ಕೆ ಹೊಂದಿಕೊಂಡು ಇರುವ ಬಡ್ಡಿ ದರ ನೀತಿಯನ್ನು ಆಧರಿಸಿ ಚಾಲ್ತಿಯಲ್ಲಿರುವ ಬಡ್ಡಿ ದರವನ್ನು ಕೆಳಗೆ ಒದಗಿಸಲಾಗಿದೆ:

| ಉತ್ಪನ್ನ | ಟಿಕೆಟ್ ಗಾತ್ರ (INR) | ROI |
|---|---|---|
| **MSME - ಗ್ರಾಮೀಣ - ವ್ಯವಹಾರ ಸಾಲಗಳು** | | |
| ಹಣಕಾಸು ಸೇರ್ಪಡಿಕೆ ಸಾಲಗಳು | 1-5 ಲಕ್ಷಗಳು | 20-28% |
| ಅತಿ ಸಣ್ಣ ವ್ಯವಹಾರದ ಸಾಲಗಳು | 5-15 ಲಕ್ಷಗಳು | 18-26% |
| ಸಣ್ಣ ವ್ಯವಹಾರದ ಸಾಲಗಳು | 15-30 ಲಕ್ಷಗಳು | 16-24% |
| **ವೆರಿಟಾಸ್ - ಗೃಹ ಸಾಲಗಳು** | | |
| ಗೃಹ ಸಾಲಗಳು | ರೂ. 5-30 ಲಕ್ಷಗಳು | 14.5-20% |
| ಆಸ್ತಿಯ ವಿರುದ್ಧ ಸಾಲ | ರೂ.5 -100 ಲಕ್ಷಗಳು | 12.5-20% |
| **MSME - ನಿರ್ವಹಣಾ ಬಂಡವಾಳದ ಸಾಲಗಳು** | | |
| ಭದ್ರತೆ-ರಹಿತ | ರೂ.0.50 ಇಂದ 2 ಲಕ್ಷಗಳು | 27-28% |
| ಭದ್ರತೆ ಸಹಿತ | ರೂ. 2-10 ಲಕ್ಷಗಳು | 24-26% |
| **ಬಳಸಿದ ವಾಹನ ಸಾಲಗಳು** | | |
| ಭದ್ರತೆ ಸಹಿತ | ರೂ. 1-15 ಲಕ್ಷಗಳು | 15-24% |

ಮೇಲಿನ ಬಡ್ಡಿ ದರವು, ವೆಚ್ಚ, ಅಪಾಯದ ಮೌಲ್ಯಮಾಪನ, ಇತ್ಯಾದಿಗಳ ಆಧಾರದಲ್ಲಿ ಕಂಪೆನಿಯಿಂದ ಆವರ್ತಕ ವಿಮರ್ಶೆಗೆ ಒಳಪಟ್ಟಿದೆ ಮತ್ತು ನಿಖರವಾದ ಬಡ್ಡಿ ದರವನ್ನು ಪ್ರತಿ ಸಾಲದ ಮಂಜೂರಾತಿಯ ಸಮಯದಲ್ಲಿ ನಮೂದಿಸಲಾಗುತ್ತದೆ.

## ಸಮಾನ ಮಾಸಿ ಕಂತುಗಳು (EMI)

EMIಗಳನ್ನು ಸಾಲದ ಮರುಪಾವತಿಯ ಅವಧಿ ಮತ್ತು ಪಡೆದುಕೊಂಡ ಬಡ್ಡಿ ದರದ ಆಧಾರದಲ್ಲಿ ಲೆಕ್ಕ ಹಾಕಲಾಗುತ್ತದೆ. EMI ಎಂದರೆ, ಅನ್ವಯಿಸುವ ಸಾಲದ ಅವಧಿಯಲ್ಲಿ ಪ್ರತಿ ತಿಂಗಳೂ ಪಾವತಿಸುವ ಅಸಲು ಮತ್ತು ಬಡ್ಡಿ ಮರುಪಾವತಿಯ ಒಟ್ಟು ಮೊತ್ತವಾಗಿದೆ. ಒಂದು ಸಲ EMI ಯನ್ನು ಪಾವತಿ ಮಾಡಿದರೆ, ಅಸಲಿನ ಭಾಗವು ಬಾಕಿ ಇರುವ ಒಟ್ಟು ಸಾಲದ ಮೊತ್ತವನ್ನು ಕಡಿಮೆ ಮಾಡುತ್ತದೆ.

## ಗಡುವಿನ ದಿನಾಂಕದಂದು EMI ಪಾವತಿಗಳು ಮತ್ತು ವಿಳಂಬಿತ ಪಾವತಿ ಶುಲ್ಕಗಳು

ಎಲ್ಲ MSME ಸಾಲಗಳ ಗಡುವಿನ ದಿನಾಂಕವು ಪ್ರತಿ ತಿಂಗಳಿನ 5ನೆಯ ತಾರೀಕಿನಂದು ಆಗಿರತಕ್ಕದ್ದು, ಎಲ್ಲ ಗೃಹ ನಿರ್ಮಾಣ ಸಾಲಗಳಿಗೆ ಅದು ಪ್ರತಿ ತಿಂಗಳಿನ 10ನೆಯ ತಾರೀಕಿನಂದು ಮತ್ತು ದೈನಿಕ/ಸಾಪ್ತಾಹಿಕ ಮರುಪಾವತಿಗಳಿರುವ ನಿರ್ವಹಣಾ ಬಂಡವಾಳದ ಸಾಲಗಳಿಗೆ ಅದು ಮರುಪಾವತಿಯ ವೇಳಾಪಟ್ಟಿಗೆ ಅನುಗುಣವಾಗಿ ಇರತಕ್ಕದ್ದು. NACH ಬಳಸಿಕೊಂಡು ಪಾವತಿಯನ್ನು ಮಾಡಲು ಆದ್ಯತೆ ನೀಡುವುದರಿಂದಾಗಿ, ಗ್ರಾಹಕರು, EMI ಮರುಪಾವತಿಯ ಗಡುವಿನ ದಿನಾಂಕದಿಂದ ಕನಿಷ್ಠ ಒಂದು ದಿನ ಮೊದಲು, ತಮ್ಮ ನಿಗದಿತ ಬ್ಯಾಂಕ್ ಖಾತೆಯಲ್ಲಿ ಸಾಕಷ್ಟು ಪ್ರಮಾಣದ ಮೊತ್ತವಿರುವುದನ್ನು ಖಚಿತಪಡಿಸಿಕೊಳ್ಳುವಂತೆ ವಿನಂತಿಸಲಾಗಿದೆ.

## ವಿಳಂಬಿತ ಪಾವತಿ ಶುಲ್ಕಗಳು

ಅಮಾನ್ಯಗೊಂಡ ಚೆಕ್ / ವಿಫಲವಾದ NACH ಗಳು, ಅಮಾನ್ಯಗೊಳ್ಳುವ ಸಮಯದಲ್ಲಿ ಒಂದು ಬಾರಿಯ ಅಮಾನ್ಯತೆ ಶುಲ್ಕಗಳು, ಹಾಗೆಯೇ EMI ಪಾವತಿ ಆಗುವ ತನಕ ವಿಳಂಬಿತ ಅವಧಿಗೆ ತಡವಾದ ಪಾವತಿ ಶುಲ್ಕಗಳು ಎರಡನ್ನೂ ಆಕರ್ಷಿಸುತ್ತವೆ.

## ಅವಧಿ ಮೀರಿದ ಬಾಕಿ ಮತ್ತು NPA ಪರಿಕಲ್ಪನೆ

EMIಗಳನ್ನು ಅಥವಾ ಮರುಪಾವತಿಯ ಬೇಬಾಕಿಗಳನ್ನು ಗಡುವಿನ ದಿನಾಂಕದ ಮೊದಲು ಅಥವಾ ಆ ದಿನದಂದು ಪಾವತಿಸಬೇಕೆಂದು ನಿರೀಕ್ಷಿಸಲಾಗಿದೆ. ಗಡುವಿನ ದಿನಾಂಕದ ಬಳಿಕ, ಅದು ಅವಧಿ ಮೀರಿದ ಬಾಕಿಯಾಗುತ್ತದೆ. ಅನುತ್ಪಾದಕ ಆಸ್ತಿಗಳು (Non-Performing Assets - NPA) ಎಂದು, 90 ದಿನಗಳಿಗಿಂತ ಹೆಚ್ಚಿನ ಅವಧಿಗೆ ಮರುಪಾವತಿಯ ಬಾಕಿಗಳು / EMIಗಳು ಸಮಯಕ್ಕೆ ಸರಿಯಾಗಿ ಪಾವತಿಯಾಗದಂತಹ ಗ್ರಾಹಕರ ಮಟ್ಟದಲ್ಲಿ ಒಟ್ಟುಗೂಡಿಸಿದ ಸಾಲಗಳಿಗೆ ಹೇಳುತ್ತಾರೆ.

## ದಿನಾಂತ್ಯ ಪ್ರಕ್ರಿಯೆಯ ಆಧಾರದಲ್ಲಿ ಅನುತ್ಪಾದಕ ಆಸ್ತಿಗಳ (NPA) ವರ್ಗೀಕರಣ

ಸಾಲಗಾರರ ಖಾತೆಗಳನ್ನು ವಿಶೇಷ ನಮೂದಾತಿ ಖಾತೆ (Special Mention Account - SMA) ಹಾಗೂ NPA ಎಂಬ ವರ್ಗೀಕರಣಗಳನ್ನು ಸಂಬಂಧಿತ ದಿನಾಂಕದ ದಿನಾಂತ್ಯದ ಪ್ರಕ್ರಿಯೆಯ ಅಂಗವಾಗಿ ಮಾಡತಕ್ಕದ್ದು ಹಾಗೂ SMA ಅಥವಾ NPA ವರ್ಗೀಕರಣದ ದಿನಾಂಕಗಳು ಅಂತಹ ದಿನಾಂತ್ಯ ಪ್ರಕ್ರಿಯೆಯನ್ನು ನಡೆಸಿದ ಕ್ಯಾಲೆಂಡರ್ ದಿನಾಂಕವಾಗಿರತಕ್ಕದ್ದು.

ಉದಾಹರಣೆಗೆ: ಒಂದು ಖಾತೆಯು ಗಡುವಿನ ದಿನಾಂಕದಂದು, ಉದಾಹರಣೆಗೆ 5ನೆಯ ಡಿಸೆಂಬರ್ 2021ರಂದು, 90 ದಿನಗಳನ್ನು ದಾಟಿದರೆ, ಆಗ ಅದನ್ನು 5ನೆಯ ಡಿಸೆಂಬರ್ 2021ರಂದು NPA ಎಂದು ವರ್ಗೀಕರಿಸಲಾಗುತ್ತದೆ.

## NPA ಅಪ್‌ಗ್ರೇಡೇಶನ್

ಸಾಲಗಾರನು ಬಡ್ಡಿ ಮತ್ತು ಅಸಲಿನ ಪೂರ್ತಿ ಬಾಕಿಗಳನ್ನು ಪಾವತಿಸಿದರೆ ಮಾತ್ರವೇ, NPA ಎಂದು ವರ್ಗೀಕರಿಸಲಾದ ಸಾಲದ ಖಾತೆಗಳನ್ನು 'ಪ್ರಮಾಣಿತ' ಆಸ್ತಿ ('standard' asset) ಎಂದು ಅಪ್‌ಗ್ರೇಡ್ ಮಾಡಲಾಗುವುದು. ಸಂಗ್ರಹಿಸಿದ ಯಾವುದೇ ಭಾಗಾಂಶದ ಮೊತ್ತವು, ಬಾಕಿ ಇರುವ EMI ಸಂಖ್ಯೆಗಳನ್ನು 3 EMIಗಳಿಗಿಂತ ಕಡಿಮೆ ಮಾಡಿದರೆ, ಆಗ ಆಸ್ತಿಯ ಅಪ್‌ಗ್ರೇಡೇಶನ್ ಆಗುವುದಿಲ್ಲ.

ಉದಾಹರಣೆಗೆ: NPA ಖಾತೆಯಲ್ಲಿ 4 EMIಗಳು ಬಾಕಿ ಇರುತ್ತವೆ. ಈ ಮೊದಲು, 2 EMIಗಳನ್ನು ಸಂಗ್ರಹಿಸಿದರೆ, ಆಗ ಖಾತೆಯನ್ನು ಪ್ರಮಾಣಿತ ಆಸ್ತಿ ಎಂದು ಅಪ್‌ಗ್ರೇಡ್ ಮಾಡಲಾಗುತ್ತಿತ್ತು. ಪರಿಷ್ಕೃತ ನಿಯಮಗಳ ಪ್ರಕಾರ, ಬಾಕಿ ಇರುವ ಎಲ್ಲ 4 EMIಗಳನ್ನೂ ಪೂರ್ತಿಯಾಗಿ ಸಂಗ್ರಹಿಸಿದರೆ ಮತ್ತು ಖಾತೆಯನ್ನು X-ಬಕೆಟ್‌ಗೆ ಮರಳಿ ಹೊರಳಿಸಿದರೆ ಮಾತ್ರವೇ ಆ ಖಾತೆಯನ್ನು ಪರಿಹಾರಗೊಂಡಿದೆ ಎಂದು ಪರಿಗಣಿಸಲಾಗುವುದು ಮತ್ತು ಪ್ರಮಾಣಿತ ಎಂದು ವರ್ಗೀಕರಿಸಲಾಗುವುದು.

ಒಮ್ಮೆ ಸಾಲವು 90 ದಿನಗಳ ಗಡುವನ್ನು ಮೀರಿದರೆ (90 Days Past Due - DPD), ಆಗ ಅದನ್ನು ಆ ತಾರೀಕಿನಂದು ಸಿಸ್ಟಂನಲ್ಲಿ NPA ಎಂದು ನಿಶಾನೆ ನೀಡಲಾಗುತ್ತದೆ. ಅಂತಹ ನಿಶಾನೆಯನ್ನು ಆಸ್ತಿಯು 0 DPD ಗೆ ತಲುಪಿದಾಗ ಮಾತ್ರವೇ, ಎಂದರೆ, ಸಂಪೂರ್ಣ ಬಾಕಿಗಳನ್ನು ತೀರಿಸಿದರೆ ಅಥವಾ ಸಾಲವನ್ನು ಚುಕ್ತಾ ಮಾಡಿ ಮುಕ್ತಾಯಗೊಳಿಸಿದರೆ ಮಾತ್ರವೇ ತೆಗೆಯಲಾಗುವುದು.

## ಜವಾಬ್ದಾರಿಯುತ ಸಾಲ ನೀಡುವ ನಡವಳಿಕೆ:

ಮಂಜೂರಾತಿಯ ಷರತ್ತುಗಳು ಮತ್ತು ನಿಬಂಧನೆಗಳಲ್ಲಿ ಆಗುವ ಯಾವುದೇ ಬದಲಾವಣೆಗಳ ಬಗ್ಗೆ, ವೆರಿಟಾಸ್, ತನ್ನ ಗ್ರಾಹಕನಿಗೆ(ರಿಗೆ), ತಾನು ಪ್ರಕಟಿಸುವ ಜಾಲತಾಣದ ಮೂಲಕ ಅಥವಾ ಗ್ರಾಹಕನಿಗೆ ನಿರ್ದಿಷ್ಟವಾಗಿ ಸೂಕ್ತವಾಗುವ ರೀತಿಯಲ್ಲಿ ಸೂಚನೆ ನೀಡುತ್ತದೆ. ಬಡ್ಡಿ ದರಗಳಲ್ಲಿ, ಶುಲ್ಕಗಳಲ್ಲಿ ಮತ್ತು ಕರವೆಚ್ಚಗಳಲ್ಲಿ ಬದಲಾವಣೆಗಳನ್ನು ಕೇವಲ ಭವಿಷ್ಯಾನ್ವಯವಾಗುವಂತೆ ಮಾತ್ರವೇ ಜಾರಿಗೊಳಿಸುವುದನ್ನು ವೆರಿಟಾಸ್ ಖಚಿತಪಡಿಸುತ್ತದೆ.

ಒಪ್ಪಂದದ ಅಡಿಯಲ್ಲಿ ಪಾವತಿಯನ್ನು ಅಥವಾ ನೆರವೇರಿಕೆಯನ್ನು ಹಿಂಪಡೆಯುವ / ತ್ವರಿತಗೊಳಿಸುವ ನಿರ್ಧಾರವು ಆಯಾಯ ಸಾಲದ ಒಪ್ಪಂದಕ್ಕೆ ಅನುಗುಣವಾಗಿ ಇರುವುದು.

ವೆರಿಟಾಸ್ ತನ್ನ ಸಾಲಗಾರನ ಎಲ್ಲಾ ಸೆಕ್ಯುರಿಟಿಗಳನ್ನು ಅಂತಹ ಸಾಲಗಾರನು ಎಲ್ಲಾ ಬಾಕಿಗಳನ್ನು ಮರುಪಾವತಿ ಮಾಡಿದ ನಂತರ ಮಾತ್ರ, ಅಥವಾ ಸಾಲಗಾರನ ಪಡೆದ ಮಿತಿಯ ಬಾಕಿ ಮೊತ್ತವನ್ನು ಅರಿತುಕೊಂಡ ನಂತರ ಮಾತ್ರ, ವೆರಿಟಾಸ್ ತನ್ನ ಸಾಲಗಾರನ ವಿರುದ್ಧ ಹೊಂದಿರಬಹುದಾದ ಯಾವುದೇ ಇತರ ಹಕ್ಕುಗಳಿಗೆ ಯಾವುದೇ ಕಾನೂನುಬದ್ಧ ಹಕ್ಕು ಅಥವಾ ಹಕ್ಕುಗಳಿಗೆ ಒಳಪಟ್ಟಿರುತ್ತದೆ. ಅಂತಹ ಸೆಟ್ ಆಫ್ ಹಕ್ಕನ್ನು ಚಲಾಯಿಸಬೇಕಾದರೆ, ಸಾಲಗಾರನಿಗೆ ಉಳಿದ ಹಕ್ಕುಗಳು ಮತ್ತು ಷರತ್ತುಗಳ ಬಗ್ಗೆ ಸಂಪೂರ್ಣ ವಿವರಗಳೊಂದಿಗೆ ನೋಟಿಸ್ ನೀಡಬೇಕು, ಸಂಬಂಧಿತ ಕ್ಲೈಮ್ ಇತ್ಯರ್ಥವಾಗುವವರೆಗೆ ಅಥವಾ ಸಾಲಗಾರನು ಪಾವತಿಸುವವರೆಗೆ ವೆರಿಟಾಸ್ ಸೆಕ್ಯುರಿಟಿಗಳನ್ನು ಉಳಿಸಿಕೊಳ್ಳಲು ಅರ್ಹವಾಗಿರುತ್ತದೆ.

ಸಾಲದ ಖಾತೆಯನ್ನು ಪೂರ್ತಿಯಾಗಿ ಮರುಪಾವತಿ / ಚುಕ್ತಾ ಮಾಡಿದ ಬಳಿಕ 30 ದಿನಗಳ ಅವಧಿಯೊಳಗೆ ನಿರಾಕ್ಷೇಪಣಾ ಪ್ರಮಾಣ ಪತ್ರದೊಂದಿಗೆ ಚರ / ಸ್ಥಿರ ಆಸ್ತಿಗಳ ಎಲ್ಲ ಮೂಲ ದಸ್ತಾವೇಜುಗಳನ್ನು ವೆರಿಟಾಸ್ ಬಿಡುಗಡೆಗೊಳಿಸತಕ್ಕದ್ದು ಮತ್ತು ಯಾವುದೇ ನೋಂದಣಾ ಕಚೇರಿಯಲ್ಲಿ ನೋಂದಾಯಿತವಾದ ಪ್ರಭಾರಗಳನ್ನು ತೆರವುಗೊಳಿಸತಕ್ಕದ್ದು.

ಒಂದು ವೇಳೆ 30 ದಿನಗಳ ಒಳಗಾಗಿ ದಸ್ತಾವೇಜುಗಳನ್ನು ಬಿಡುಗಡೆಗೊಳಿಸಲು ವಿಫಲವಾದರೆ, ವಿಳಂಬದ ಪ್ರತಿ ದಿನಕ್ಕೂ ರೂ.5000/-ರ ಮೊತ್ತವನ್ನು ವೆರಿಟಾಸ್ ಪಾವತಿಸತಕ್ಕದ್ದು. ಮೂಲ ಸ್ಥಿರಾಸ್ತಿ ದಸ್ತಾವೇಜುಗಳು ಭಾಗಶಃ ಅಥವಾ ಪೂರ್ತಿಯಾಗಿ ಕಳೆದುಹೋದ/ಹಾನಿಗೊಂಡ ಪ್ರಕರಣದಲ್ಲಿ, ಅಂತಹ ಸ್ಥಿರಾಸ್ತಿ ದಸ್ತಾವೇಜುಗಳ ನಕಲು/ದೃಢೀಕೃತ ನಕಲುಗಳನ್ನು ಪಡೆದುಕೊಳ್ಳಲು ಸಾಲಗಾರನಿಗೆ ವೆರಿಟಾಸ್ ಸಹಾಯ ಮಾಡತಕ್ಕದ್ದು ಮತ್ತು ಅದಕ್ಕೆ ತಗಲುವ ವೆಚ್ಚಗಳನ್ನು, ಮೇಲೆ ಸೂಚಿಸಿದಂತೆ ಪರಿಹಾರವನ್ನು ಪಾವತಿಸುವುದರೊಂದಿಗೆ, ಹೆಚ್ಚುವರಿಯಾಗಿ ಭರಿಸತಕ್ಕದ್ದು. ಆದಾಗ್ಯೂ, ಅಂತಹ ಪ್ರಕರಣಗಳಲ್ಲಿ, ವಿಳಂಬಿತ ಅವಧಿಯ ದಂಡವನ್ನು 60 ದಿನಗಳ ನಂತರದಿಂದ ಲೆಕ್ಕ ಹಾಕಲಾಗುವುದು. ಇದು, ಅನ್ವಯವಾಗುವ ಕಾನೂನಿಗೆ ಅನುಗುಣವಾಗಿ ಸಾಲಗಾರನ ಹಕ್ಕುಗಳಿಗೆ ಯಾವುದೇ ಪೂರ್ವಾಗ್ರಹವಾಗದಂತೆ ಇರುತ್ತದೆ.

ವೆರಿಟಾಸ್ ತನ್ನ ಸಾಲಗಾರರಿಗೆ ಮೂಲ ಚರ / ಮೊಬೈಲ್ ಹಣವನ್ನು ಸಾಲ ಖಾತೆ ಸೇವೆ ಸಲ್ಲಿಸಿದ ಶಾಖೆಯಿಂದ ಅಥವಾ ದಾಖಲೆಗಳು ಲಭ್ಯವಿರುವ ವೆರಿಟಾಸ್ನ ಇತರ ಯಾವುದೇ ಕಚೇರಿಯಿಂದ ಕಳುಹಿಸುತ್ತದೆ. ಸಾಲಗಾರನು ಆದ್ಯತೆ ನೀಡಿದಂತೆ ದಾಖಲೆಗಳನ್ನು ಸಂಗ್ರಹಿಸಲು ರಿಯಲ್ ಎಸ್ಟೇಟ್ ಆಯ್ಕೆಗಳನ್ನು ನೀಡುತ್ತದೆ.

## ಸಾಲಗಾರರ ಅಥವಾ ಸಹ ಸಾಲಗಾರರ ಮರಣದ ಸಂದರ್ಭದಲ್ಲಿ:

ಅಂತಹ ಸಾಲಗಾರರ ಉತ್ತರಾಧಿಕಾರಿಗಳು ಮಾತ್ರವೇ ವೆರಿಟಾಸ್‌ನಿಂದ ಚರ / ಸ್ಥಿರಾಸ್ತಿಯ ಮೂಲ ದಸ್ತಾವೇಜುಗಳನ್ನು ಕೋರಲು/ ಸಂಗ್ರಹಿಸಲು ಹಕ್ಕು ಹೊಂದಿದವರಾಗಿರುತ್ತಾರೆ. ಅಂತಹ ಸಂದರ್ಭದಲ್ಲಿ, ಅಂತಹ ಸಾಲಗಾರನ ಎಲ್ಲಾ ಕಾನೂನುಬದ್ಧ ವಾರಸುದಾರರು ಮೂಲ ಚರ / ಸ್ಥಿರ ಆಸ್ತಿ ದಾಖಲೆಗಳನ್ನು ಸಂಗ್ರಹಿಸಲು ಶಾಖೆಯಲ್ಲಿ ಭೌತಿಕವಾಗಿ ಹಾಜರಿರಬೇಕು, ಸಾಲಗಾರರ ಎಲ್ಲಾ ಕಾನೂನುಬದ್ಧ ವಾರಸುದಾರರು ಶಾಖೆಗೆ ಬರಲು ಸಾಧ್ಯವಾಗದಿದ್ದರೆ, ಕಾನೂನುಬದ್ಧ ವಾರಸುದಾರರಲ್ಲಿ ಒಬ್ಬರ ಪರವಾಗಿ ಅಧಿಕಾರ ಪತ್ರವನ್ನು ಪ್ರಸ್ತುತಪಡಿಸಬೇಕು. ಒಂದು ಅಥವಾ ಹೆಚ್ಚು ಕಾನೂನುಬದ್ಧ ವಾರಸುದಾರರು ಅಪ್ರಾಪ್ತ ವಯಸ್ಕರಾಗಿದ್ದರೆ, ನೈಸರ್ಗಿಕ ಪೋಷಕರು ಅಥವಾ ನ್ಯಾಯಾಲಯ ನೇಮಿಸಿದ ಪೋಷಕರು ಈ ಸಣ್ಣ ಕಾನೂನುಬದ್ಧ ವಾರಸುದಾರರ ಪರವಾಗಿ ದಾಖಲೆಗಳನ್ನು ಸಂಗ್ರಹಿಸಬೇಕು.

ಈ ಕೆಳಗಿನ ದಸ್ತಾವೇಜುಗಳನ್ನು ಮರಣದ ಮಾನ್ಯವಾದ ಪುರಾವೆಯಾಗಿ ಮತ್ತು ಮರಣಿಸಿದವರ ವಾರಸುದಾರರು ಎನ್ನುವುದಕ್ಕೆ ಮಾನ್ಯವಾದ ಪುರಾವೆಯಾಗಿ ಅಂಗೀಕರಿಸಲಾಗುವುದು.

- ಮಾಲೀಕತ್ವ ಹೊಂದಿದವರ ಬಗ್ಗೆ ಆಯಾಯ ಪುರಸಭೆಗಳಿಂದ ವಿತರಿಸಲಾದ ಮರಣ ಪ್ರಮಾಣ ಪತ್ರ
- ಕಂದಾಯ ಇಲಾಖೆಯಿಂದ / ತಹಶಿಲ್ದಾರರಿಂದ ವಿತರಿಸಲಾದ ವಾರಸುದಾರ ಪ್ರಮಾಣ ಪತ್ರ ಅಥವಾ ಸಕ್ಷಮ ನ್ಯಾಯಾಲಯದಿಂದ ವಿತರಿಸಲಾದ ಉತ್ತರಾಧಿಕಾರ ಪ್ರಮಾಣ ಪತ್ರ ಅಥವಾ
- ಆಡಳಿತಾಧಿಕಾರ ಪತ್ರ
- ವಾರಸುದಾರರ ವಿವರಗಳನ್ನು ನೀಡುವ ಪ್ರಮಾಣ ಪತ್ರ ದಂಡಾಧಿಕಾರಿ/ ಜಿಲ್ಲಾ ನ್ಯಾಯಾಲಯದ ಹಿಂಬರಹದೊಂದಿಗೆ

- ವಾರಸುದಾರರೊಳಗೆ ವಿವಾದವಿರುವ ಸಂದರ್ಭದಲ್ಲಿ, ನ್ಯಾಯಾಲಯದಿಂದ ವಿತರಿಸಲಾದ ವಾರಸುದಾರ ಪ್ರಮಾಣಪತ್ರ/ ಆಡಳಿತಾಧಿಕಾರ ಪತ್ರವನ್ನು ಮಾತ್ರವೇ ವಾರಸುದಾರರ ದೃಢೀಕೃತ ಪುರಾವೆಯಾಗಿ ಸ್ವೀಕರಿಸಲಾಗುವುದು.

## ಸೆಂಟ್ರಲ್ KYC ರಿಜಿಸ್ಟ್ರಿ




ಸೆಂಟ್ರಲ್ ರಿಜಿಸ್ಟ್ರಿ ಆಫ್ ಸೆಕ್ಯುರಿಟೈಸೇಷನ್ ಅಸೆಟ್ ರೀಕನ್ಸ್ಟ್ರಕ್ಷನ್ ಅಂಡ್ ಸೆಕ್ಯೂರಿಟಿ ಇನ್ಟ್ರೆಸ್ಟ್ ಆಫ್ ಇಂಡಿಯಾ (CERSAI), ಗ್ರಾಹಕ KYC ದಾಖಲೆಗಳನ್ನು ಕೇಂದ್ರ ಸಂಗ್ರಹಾಗಾರದಲ್ಲಿ ಇರಿಸಿಕೊಳ್ಳುವ ಜವಾಬ್ದಾರಿ ವಹಿಸಿಕೊಂಡಿದೆ.

## KYC ಗೆ ಅಗತ್ಯವಾದ ದಸ್ತಾವೇಜುಗಳು

1. ಗುರುತಿನ ಪುರಾವೆ (PoI) - PAN, ಆಧಾರ್ ಕಾರ್ಡ್, ಪಾಸ್‌ಪೋರ್ಟ್, ಚಾಲನಾ ಪರವಾನಗಿ, ಮತದಾರ ಗುರುತಿನ ಚೀಟಿ, NREGA ಉದ್ಯೋಗ ಕಾರ್ಡ್
2. ವಿಳಾಸದ ಪುರಾವೆ (PoA) - ಆಧಾರ್ ಕಾರ್ಡ್, ಪಾಸ್‌ಪೋರ್ಟ್, ಚಾಲನಾ ಪರವಾನಗಿ, ಮತದಾರ ಗುರುತಿನ ಚೀಟಿ
3. ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ
4. PAN ಕಾರ್ಡ್ ವಿವರಗಳು

## CKYC ಐಡೆಂಟಿಫೈಯರ್ ಮತ್ತು ಅವುಗಳ ಉಪಯೋಗ

- CKYC ಐಡೆಂಟಿಫೈಯರ್ ಎನ್ನುವುದು 14-ಅಂಕಿಗಳ ಒಂದು ವಿಶಿಷ್ಟವಾದ ಗುರುತಿನ ಸಂಖ್ಯೆಯಾಗಿದ್ದು ಇದನ್ನು ನಿಮಗೆ ನಿಮ್ಮ ಹಣಕಾಸು ಸಂಸ್ಥೆಯು CKYCRನಲ್ಲಿ ಅಪ್‌ಲೋಡ್ ಮಾಡಿದ KYC ವಿವರಗಳ ಆಧಾರದಲ್ಲಿ ವಹಿಸಲಾಗುವುದು.
- CKYC ಐಡೆಂಟಿಫೈಯರ್ ಅನ್ನು ನೀವು ಖಾತೆ-ಆಧಾರಿತ ಸಂಬಂಧ ಹೊಂದಿರುವ ಯಾವುದೇ ಹಣಕಾಸು ಸಂಸ್ಥೆಯಿಂದ ನೇರವಾಗಿ ಪಡೆದುಕೊಳ್ಳಬಹುದಾಗಿದೆ.
- CKYC ಐಡೆಂಟಿಫೈಯರ್, ಭಾರತದಾದ್ಯಂತ ಮಾನ್ಯತೆ ಹೊಂದಿದೆ ಹಾಗೂ RBI, SEBI, IRDAI ಮತ್ತು PFRDAಗಳ ನಿಯಂತ್ರಣದಲ್ಲಿರುವ ಯಾವುದೇ ಹಣಕಾಸು ಸಂಸ್ಥೆಯಲ್ಲಿ ಖಾತೆ ತೆರೆಯುವಾಗ ಇದನ್ನು ಬಳಸಬಹುದಾಗಿದೆ.
- ನೀವು ಒಂದು ಹೊಸ ಹಣಕಾಸು ಸಂಬಂಧ ಆರಂಭಿಸಬೇಕಾದಾಗಲೆಲ್ಲ, ಅದೇ KYC ದಾಖಲೆಗಳನ್ನು (PAN ಕಾರ್ಡ್, ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಇತ್ಯಾದಿ) ಸಲ್ಲಿಸುವುದರ ಬದಲಾಗಿ CKYC ಐಡೆಂಟಿಫೈಯರ್ ಅನ್ನು ಸಲ್ಲಿಸಿ.
- ಒಂದೇ ಸ್ಥಳದಲ್ಲಿ ದಾಖಲೆಗಳನ್ನು ಸಲ್ಲಿಸುವ ಮೂಲಕ, ನೀವು ನಿಮ್ಮ ಸಂಪರ್ಕದ ವಿವರಗಳು, ಈಗಿನ ವಿಳಾಸ ಇತ್ಯಾದಿ KYC ವಿವರಗಳನ್ನು ನೀವು ಖಾತೆ ಹೊಂದಿರುವ ಎಲ್ಲ ಹಣಕಾಸು ಸಂಸ್ಥೆಗಳಲ್ಲಿಯೂ ಅಪ್‌ಡೇಟ್ ಮಾಡಬಹುದು.

## CKYC ಐಡೆಂಟಿಫೈಯರ್ ಅನ್ನು ಉಪಯೋಗಿಸುವುದರ ಪ್ರಯೋಜನಗಳು

- ಎಲ್ಲ ಹಣಕಾಸು ಸಂಬಂಧಗಳಿಗೂ ಒಂದೇ ಸಲದ KYC ಅನುಪಾಲನೆ / ಅಪ್‌ಡೇಶನ್
- ಬ್ಯಾಂಕಿಂಗ್, ವಿಮೆ, ಸ್ಟಾಕ್ಸ್, POP ಇತ್ಯಾದಿ ಎಲ್ಲ ಹಣಕಾಸು ಉತ್ಪನ್ನಗಳಾದ್ಯಂತ ಉಪಯೋಗಿಸಬಹುದು
- ಪುನರಾವರ್ತಿತ KYC ದಾಖಲೆಗಳನ್ನು ಸಲ್ಲಿಸುವುದು ಅಗತ್ಯವಿಲ್ಲ.
- ಕಾಗದರಹಿತ KYC ಪ್ರಕ್ರಿಯೆ
- ನಿಮ್ಮ CKYC ಐಡೆಂಟಿಫೈಯರ್ ಅನ್ನು ಭಾರತದಾದ್ಯಂತ ಉಪಯೋಗಿಸಬಹುದು. ನಿಮ್ಮ ಹಣಕಾಸು ಸಂಸ್ಥೆಯಿಂದ ಇಂದೇ ನಿಮ್ಮ CKYC ಐಡೆಂಟಿಫೈಯರ್ ಅನ್ನು ಪಡೆದುಕೊಳ್ಳಿ.

## ಗ್ರಾಹಕ ಸೇವಾಕೇಂದ್ರದ ಸಂಪರ್ಕ ವಿವರಗಳು

ಗ್ರಾಹಕರ ಯಾವುದೇ ದೂರುಗಳನ್ನು ಅಥವಾ ವಿನಂತಿಗಳನ್ನು ಗ್ರಾಹಕ ಸಂಪರ್ಕ ಕೇಂದ್ರದ ಮೂಲಕ ಕಂಪೆನಿಯ ಗಮನಕ್ಕೆ ತರಬಹುದು. ನಮ್ಮ ಗ್ರಾಹಕ ಸೇವಾ ಕೇಂದ್ರದ ಟೋಲ್ ಫ್ರೀ ಸಂಖ್ಯೆ 1800-202-9155 ಮತ್ತು ಇ-ಮೇಲ್ ವಿಳಾಸ customercare@veritasfin.in.